
# 15-06-2026

# INDUCTION INAUGURATION DAY-01



**"ಸ್ಪರ್ಧೆ ನಮ್ಮ ಜೊತೆ, ಸಹಕಾರ ಎಲ್ಲರ ಜೊತೆ"**

**ಶ್ರೀಮತ್ ಸ್ವಾಮಿ ಸರ್ವಜಯಾನಂದ್‌ಜೀ ಮಹಾರಾಜ್**

ವಿದ್ಯಾರ್ಥಿಗಳಿಗೆ ಕನಸಿದ್ದರೆ ಸಾಲದು ಆ ಕನಸು ನನಸಾಗಲು ಕಠಿಣ ಪರಿಶ್ರಮ ಬೇಕಾಗುತ್ತದೆ. ಪ್ರತಿಯೊಬ್ಬರು ಕಷ್ಟಪಟ್ಟು ಯಶಸ್ಸನ್ನು ಪಡೆಯುವ ಮೂಲಕ ಸುಂದರ ಭವಿಷ್ಯವನ್ನು ರೂಪಿಸಿಕೊಳ್ಳಬೇಕೆಂದು ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ಸ್ವಾಮೀಜಿಗಳಾದಂತಹ ಶ್ರೀಮತ್ ಸ್ವಾಮಿ ಸರ್ವಜಯಾನಂದ್‌ಜೀ ಮಹಾರಾಜ್ ತಿಳಿಸಿದರು.

ಇಂದು ನಗರದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ೨೦೧೮–೧೯ನೇ ಶೈಕ್ಷಣಿಕ ಸಾಲಿನ ಪ್ರಥಮ ವರ್ಷದ ಪದವಿ ವಿದ್ಯಾರ್ಥಿಗಳಿಗೆ **"ಪುನಶ್ಚೇತನ ಮತ್ತು ಅಭಿವಿನ್ಯಾಸ ಕಾರ್ಯಕ್ರಮ"ದ** ಉದ್ಘಾಟಕರಾಗಿ ಆಗಮಿಸಿ ಮಾತನಾಡುತ್ತಿದ್ದ ಅವರು ವಿದ್ಯಾರ್ಥಿಗಳು ತಮ್ಮ ವ್ಯಕ್ತಿತ್ವ ರೂಪಿಸಿಕೊಳ್ಳಲು ಗಂಭೀರ ಚಿಂತನೆ ಅಗತ್ಯವಾಗಿದ್ದು ಮನಸ್ಸಿನ ನಿಯಂತ್ರಣಕ್ಕಾಗಿ ದೈಹಿಕ ಶಕ್ತಿ, ಮಾನಸಿಕ ಶಕ್ತಿ, ನೈತಿಕ ಶಕ್ತಿ ಹಾಗು ಆಧ್ಯಾತ್ಮಿಕ ಶಕ್ತಿಗಳನ್ನು ಅಳವಡಿಸಿಕೊಂಡಲ್ಲಿ ಪ್ರತಿಯೊಬ್ಬರಿಗೂ ಯಶಸ್ಸು ಸಾಧ್ಯ. ನಿರಂತರ ಅಧ್ಯಯನದಿಂದ ಮಾನಸಿಕ ಶಕ್ತಿ ಹೆಚ್ಚುತ್ತದೆ. ಪ್ರತಿ ವಿಷಯದ ಬಗ್ಗೆ ಆಸಕ್ತಿ, ಸತ್ಯ ಪರಿಪಾಲನೆ, ಧ್ಯಾನ ಮತ್ತು ದೈವತ್ವದ ಬಗ್ಗೆ ನಂಬಿಕೆ ಇವುಗಳಿಂದ ವಿದ್ಯಾರ್ಥಿಗಳು ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕೆಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಪ್ರಸಕ್ತ ಸಾಲಿನ ಭಾರತೀಯ ಆಡಳಿತ ಸೇವೆಯ ಪರೀಕ್ಷೆಯಲ್ಲಿ ೫೩ನೇ ರ್‍ಯಾಂಕ್ ಹಾಗೂ ಕರ್ನಾಟಕ್ಕೆ ಪ್ರಥಮ ಸ್ಥಾನ ಪಡೆದು ನಿಯೋಜಿತ ಐ.ಎ.ಎಸ್ ಅಧಿಕಾರಿಯಾದ ಕಿರಣ್ ಕಾಮಟೆ ಮಾತನಾಡುತ್ತಾ ದೊಡ್ಡ ಕನಸು ಕಾಣುವುದು ಅಪರಾಧವೆಂದು ಅನೇಕರು ಭಾವಿಸುತ್ತಾರೆ ಆದರೆ ಅದು ತಪ್ಪು ತಿಳುವಳಿಕೆ, ಪ್ರತಿಯೊಬ್ಬರು ಕಠಿಣ ಪರಿಶ್ರಮದಿಂದ ತಾವು ಕಂಡ ಕನಸುಗಳನ್ನು ನನಸಾಗಿಸಲು ಸಾಧ್ಯ ಎಂದ ಅವರು ತಮ್ಮ ವೈಯಕ್ತಿಕ ಬದುಕಿನ ಘಟನೆಗಳನ್ನು ವಿವರಿಸುತ್ತಾ ಹಳ್ಳಿಯಿಂದ ನಾನು ದೆಹಲಿಗೆ ಮೊದಲು ಹೋಗಿದ್ದು ಯುಪಿಎಸ್‌ಸಿ ಸಂದರ್ಶನಕ್ಕೆ. ಗರಿಷ್ಟ ಆಯ್ಕೆಯ ಅಂತಿಮ ಹಂತದಲ್ಲಿ ನಾನು ರಾಜ್ಯಕ್ಕೆ ಮೊದಲಿಗನಾಗಿ ಆಯ್ಕೆಯಾಗಿರುವುದು ನನಗಷ್ಟೇ ಅಲ್ಲದೇ ನನ್ನ ಪೋಷಕರಿಗು ಅತೀವವಾದ ಸಂತಸವನ್ನು ತಂದಿದೆ. ಆದುದರಿಂದ ಪೋಷಕರು ಮಕ್ಕಳ ಕನಸಿಗೆ ನೀರೆರೆಯುವ ಕೆಲಸವನ್ನು ಮಾಡಬೇಕೇ ಹೊರತು, ಅವರ ಕನಸುಗಳನ್ನು ಮುರುಟುವ ಕೆಲಸ ಮಾಡಬಾರದು. ಜೀವನ ಎಂದು ಸುಲಭವಲ್ಲ ತಂದೆ ತಾಯಿಗಳ ಶ್ರಮವೇ ಮಕ್ಕಳಿಗೆ ಸ್ಫೂರ್ತಿ. ಐಎಎಸ್‌ನಂತಹ ಹುದ್ದೆಗಳ ಅಧಿಕಾರಿಗಳು ಸಮಾಜಕ್ಕೆ ಬಹಳಷ್ಟು ಕೊಡುಗೆಗಳನ್ನು ನೀಡಬಹುದಾಗಿದೆ ಹಾಗಾಗಿ ವಿದ್ಯಾರ್ಥಿಗಳು ಪದವಿಯ ಜೊತೆಗೆ ಯುಪಿಎಸ್‌ಸಿ ಪರೀಕ್ಷೆಗಳ ತಯಾರಿಯನ್ನು ನಡೆಸಬೇಕೆಂದು ಕರೆನೀಡಿದರು.

ಪ್ರಾಸ್ತಾವಿಕ ನುಡಿಗಳನ್ನಾಡಿದ ಕಾಲೇಜಿನ ಪ್ರಾಂಶುಪಾಲರಾದ ಡಾ.ಎಸ್.ಮರೀಗೌಡರವರು ಕಾಲೇಜಿನ ಬಗ್ಗೆ, ತರಗತಿಗಳ ಬಗ್ಗೆ, ಗ್ರಂಥಾಲಯ, ವಾಚನಾಲಯಗಳ ಬಗ್ಗೆ ಮಾಹಿತಿಯನ್ನು ನೀಡಿ ಕಾಲೇಜನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಿದರು. ಕಾಲೇಜು ಶೈಕ್ಷಣಿಕವಾಗಿ ಎಲ್ಲಾ ಸವಲತ್ತುಗಳನ್ನು ವಿದ್ಯಾರ್ಥಿಗಳಿಗೆ ನೀಡುತ್ತಿದೆ. ಜೊತೆಗೆ ಇಂತಹ ಅಭಿವಿನ್ಯಾಸ ಕಾರ್ಯಕ್ರಮಗಳು ವಿದ್ಯಾರ್ಥಿಗಳು ಮತ್ತು ಶಿಕ್ಷಕರ ನಡುವಿನ ಸಂಬಂಧವನ್ನು ಉತ್ತಮ ಪಡಿಸಿಕೊಳ್ಳುವುದು ನಾಯಕತ್ವದ ಗುಣವನ್ನು ಬೆಳೆಸುವುದು, ಸಂಘಟನಾ ಶಕ್ತಿಯನ್ನು ಹೆಚ್ಚಿಸಿಕೊಳ್ಳುವುದಕ್ಕೆ ಸಹಕಾರಿಯಾಗಿದೆ ಎಂದು ತಿಳಿಸಿದರು.

ವಿದ್ಯಾವರ್ಧಕ ಸಂಘದ ಗೌ||ಕಾರ್ಯದರ್ಶಿಗಳಾದ ಪಿ.ವಿಶ್ವನಾಥ್ ತಮ್ಮ ಅಧ್ಯಕ್ಷೀಯ ನುಡಿಗಳಲ್ಲಿ ಮಾತನಾಡುತ್ತಾ ೫ ದಿನಗಳವರೆಗೆ ನಿಮಗೆ ಪುನಶ್ಚೇತನ ಅಭಿವಿನ್ಯಾಸ ಕಾರ್ಯಕ್ರಮ ನಡೆಯಲಿದ್ದು ಅದನ್ನು ನೀವು ಸದುಪಯೋಗಪಡಿಸಿಕೊಳ್ಳಬೇಕು. ವಿದ್ಯಾರ್ಥಿಗಳಿಗೆ ಇಂತಹ ಕಾರ್ಯಕ್ರಮಗಳಿಂದ ಕಾಲೇಜಿನ ಬಗ್ಗೆ ಅರಿವು ಮೂಡಲು ಸಹಕಾರಿಯಾಗುತ್ತದೆ. ಮೊದಲೆಲ್ಲಾ ಕೆಲವೇ ಕೆಲವು ಜನರು ವಿದ್ಯಾಭ್ಯಾಸವನ್ನು ಪಡೆಯುತ್ತಿದ್ದರು. ಸ್ವಾತಂತ್ರ್ಯ ನಂತರ ಸರ್ಕಾರಗಳು ಶಿಕ್ಷಣಕ್ಕೆ ಹೆಚ್ಚಿನ ಮಹತ್ವವನ್ನು ನೀಡಿದ್ದಾರೆ. ಪದವಿಯ ಜೊತೆ ಜೊತೆಗೆ ಸ್ಪರ್ಧಾತ್ಮಕ ಪರೀಕ್ಷೆಗಳ ಉತ್ತಮ ಅಧಿಕಾರಿಗಳಾಗಿ ಹೊರಹೊಮ್ಮುವಂತೆ ತಿಳಿಸಿದರು.

ಕಾಲೇಜಿನ ಪ್ರತಿಭಾವಂತ ವಿದ್ಯಾರ್ಥಿಗಳಾದ ಜಾಹ್ನವಿ.ಹೆಚ್.ಎನ್, ಹೇಮಪ್ರಿಯ.ಸಿ.ವಿ, ಸ್ಪಂದನಾ ಕಶ್ಯಪ್.ಟಿ.ಯು, ಮಾಧುರಿ.ಎ.ಎಸ್ ಹಾಗೂ ತೇಜಸ್.ಬಿ.ಆರ್ ಅವರುಗಳನ್ನು ಸನ್ಮಾನಿಸಲಾಯಿತು. ಕು.ಹರಿಪ್ರಿಯ ಪ್ರಾರ್ಥಿಸಿದ ಕಾರ್ಯಕ್ರವನ್ನು ಶ್ರೀಮತಿ ವಿದ್ಯಾ.ಆರ್ ನಿರೂಪಿಸಿ, ಶ್ರೀಮತಿ.ಲಾವಣ್ಯ.ಎಸ್ ಸ್ವಾಗತಿಸಿದರು. ವಿವಿಸಂಘದ ಗೌ||ಕೋಶಾಧ್ಯಕ್ಷರಾದ ಶ್ರೀ.ಶ್ರೀಶೈಲರಾಮಣ್ಣವರ್, ಕಾಲೇಜು ನಿರ್ವಹಣಾ ಮಂಡಳಿಯ ಅಧ್ಯಕ್ಷರಾದ ಡಾ.ತೇಜಸ್ ಬಾಬ.ಕೆ.ಸಿ, ಅಧ್ಯಾಪಕರು, ಅಧ್ಯಾಪಕೇತರರು, ೨೦೧೮–೧೯ನೇ ಶೈಕ್ಷಣಿಕ ಸಾಲಿಗೆ ಪದವಿ ತರಗತಿಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳು, ಪೋಷಕರು ಭಾಗವಹಿಸಿದ್ದ ಕಾರ್ಯಮವನ್ನು ಶ್ರೀಮತಿ.ಪಲ್ಲವಿ.ಡಿ ವಂದಿಸಿದರು.

***" There is no short cut for success in life" - Srimat Swami Sarvajayanandaji Maharaj***

Induction Programme for newly admitted Degree students for the Academic Year 2026-27 was held today at Vidyavardhaka First Grade College, Sheshadri Iyer Road Mysuru.

Srimat Swami Sarvajayanandaji Maharaj of Sri Ramakrishna Ashrama,Mysuru, inaugurated the programme. In his inaugural address he said, "Success is not final, failure is not an end". He advised the students to aim for higher dreams. Life is a journey of fulfilling those dreams which we have dreamt. Be determined and overcome all the obstacles in life. He specified about four important key points which lead to success in life. Physical strength, Mental strength, Moral strength and Spiritual strength. He narrated a story about Subhash Chandra Bose in his young age how the preaching's of Swami Vivekananda helped him to reach a great destiny in his life.

Sri Kiran Kamate, IAS, the 53rd Rank at All India Level UPSC Exam 2026 and 1st Rank holder of Karnataka batch, was the chief guest. In his address, he advised the audience that, dreaming big is not an offence, try to dream always big and great. If a nation should be successful, each and every person need to have three important role models in their life. i.e., firstly the father, the mother and the teacher. Live for your dreams, don't strive only to live and prove yourself early. Time if very short but, life is very precious. Focus on your dreams, acquire knowledge and skills with ethics. He finally advised the students to achieve in some of the competitive exams like UPSC, IAS, IPS and KAS etc.,

Dr.S.MariGowda, Principal of the college, in his introductory remarks, he congratulated all the parents and the students for opting this college which is ahead of it's Golden jubilee celebration. He advised all the students who have gathered, to follow Sri Kiran Kamate IAS, as a role model of their life. He ensured the parents to be tension free, as the college assures student friendly and a safe zone for all the students. He remembered the academic achievers of the previous year and advised the freshers to set forth the goals in their life and to acquire skills and knowledge so that, it leads to their all-round development.

Dr. Tejas Baba K.C, Chairman, CMC, VVFGC, opined that 'education makes a man'. College life is a golden life and the language barriers should not put us back from achievement. He advised the students to carry forward the legacy of VVFGC.

Er.P.Vishwanath, Hon. Secretary of Vidyavardhaka Sangha, in his Presidential address spoke about inception of the college and the Induction Programme. He suggested the students to utilize the resources available in the campus to the optimum to upgrade their knowledge, to acquire skills and to imbibe values.

Sri Shrishaila Ramannavar, Hon. Treasurer of VV Sangha, Dr. Tejas Baba K.C, Chairman, CMC, VVFGC, Mysuru and Prof. Siddaraju S, Programme Co-ordinator were present on the dias.

The programme was started with invocation by Ms.Haripriya, Prof. Lavanya S welcomed the dignitaries and introduced the Chief guest.Prof. Pallavi D rendered the vote of thanks. Prof. Vidya R compered the programme. The academic achievers were felicitated on the occasion. All the faculties, non-teaching staff of the college and parents graced the occasion.

(Dr.S.MariGowda)


Vidyavardhaka Sangha (R), Mysuru
VIDYAVARDHAKA FIRST GRADE COLLEGE
Sheshadri Iyer Road, Mysuru – 01
INDUCTION PROGRAMME
For 1st Year Degree Students & Felicitation
Achievers
Chief Guest
Inaugurator
Dr.TEJAS BABA K.C
Sri SIDDARAJU S








Vidyavardhaka Sangh
Monday |Time :10:00A




Vidyavardhaka Sangha (R), Mysuru


Vidyavardhaka Sangha (R), Mysuru
VIDYAVARDHAKA FIRST GRADE COLLEGE
Sheshadri Iyer Road, Mysuru – 01
INDUCTION PROGRAMME
Year Degree Students & Felicitation to Achievers




), Mysuru
Iyer Road
suru – 01
For 1
Date


Vidyavardhaka Sangha (R),
RDHAKA FIRST GRA


VIDYAVA
HAKA FIRST G
E COLLEG


Vidyavardhaka Sangha (R), Mysuru
VIDYAVARDHAKA FIRST GRADE COLLEGE
Sheshadri Iyer Road, Mysuru - 01
INDUCTION PROGRAMME




Vidyavardhaka Sangha (R), Mysuru
VIDYAVARDHAKA FIRST GRADE COLLEGE
Sheshadri Iyer Road, Mysuru – 01


Vidyavardhaka Sangha (R), Mysuru
VIDYAVARDHAKA FIRST GRADE COLLEGE
Sheshadri Iyer Road, Mysuru - 01
INDUCTION PROGRAMME
Year Degree Students & Felicitation to Achievers
Inaugurator
Chief Guest
Venue: College Premises


Vidyavardhaka Sangha (R), Mysuru
Sheshadri Iyer Road, Mysuru - 01
College Premises

